ESTD: 1991 K.P. E. Society's Ph.No.08482-229892

**SIDDHARTH ARTS AND COMMERCE DEGREE COLLEGE**

**Janwada Road, Bidar-585 401.**

**KPES/SACC/BDR/NSS/2025-26** **Date : 24-09-2025**

# ರಾಷ್ಟ್ರೀಯ ಸೇವಾ ಯೋಜನೆಯ ದಿನಾಚರಣೆ

## ಸ್ವಸ್ಥನಾರಿ ಸಶಕ್ತ ಪರಿವಾರ ಅಭಿಯಾನ(17–09–2025 ರಿಂದ 02–10–2025)

ದಿನಾಂಕ 24–09–2025 ಸ್ಥಳ : ಸೆಮಿನಾರ್ ಹಾಲ್

| | | |
|---|---|---|
| ಬುದ್ದ ವಂದನೆ | : | ಕುಮಾರಿ ಪಲ್ಲವಿ ಸಂಗಡಿಗರು |
| ಸ್ವಾಗತ | : | ಜಗನ್ನಾಥ ಬಡಿಗೇರ್ |
| ಮುಖ್ಯ ಅತಿಥಿ | : | ಸಂಜೀವಕುಮಾರ<br>ತಾಲೂಕಾ ಮೇಲ್ವಿಚಾರಕರು, ಕ್ಷಯರೋಗ (ಟಿ.ಬಿ.) ವಿಭಾಗ |
| ಅತಿಥಿಗಳು | : | ಗೌತಮ ಜ್ಯೋತಿ<br>ಮೇಲ್ವಿಚಾರಕರು, ಕ್ಷಯರೋಗ (ಟಿ.ಬಿ.) ವಿಭಾಗ |
| | : | ಜಗದೀಶ ಸಂದರ್ಶಕರು, ಟಿ.ಬಿ ವಿಭಾಗ |
| | : | ಶ್ರೀಮತಿ ಮಲ್ಲಮ್ಮ ಸಂದರ್ಶಕರು, ಟಿ.ಬಿ. ವಿಭಾಗ |
| ಉಪಸ್ಥಿತಿ | : | ಜಗದೇವಪ್ಪಾ ಚಿಕ್ಕಿ ಉಪಪ್ರಾಚಾರ್ಯರು |
| ಅಧ್ಯಕ್ಷತೆ | : | ಗೋಪಾಲ ಬಡಿಗೇರ್ |
| ವಂದನಾರ್ಪಣೆ | : | ಬಸವರಾಜ ಸ್ವಾಮಿ |
| ನಿರೂಪಣೆ | : | ರಾಜಕುಮಾರ ಸಿಂಧೆ |

ESTD: 1991 K.P. E. Society's Ph.No.08482-229892

**SIDDHARTH ARTS AND COMMERCE DEGREE COLLEGE**

**Janwada Road, Bidar-585 401.**

**KPES/SACC/BDR/NSS/2025-26** **Date : 24-09-2025**

ಜಿಲ್ಲಾ ಆರೋಗ್ಯ ಇಲಾಖೆಯ ಕ್ಷಯರೋಗ ವಿಭಾಗ ಹಾಗೂ ಸಿದ್ದಾರ್ಥ ಕಾಲೇಜಿನ ಎನ್ ಎಸ್ ಎಸ್ ಘಟಕದ ಸಂಯುಕ್ತಾಶ್ರಯದಲ್ಲಿ ಸ್ವಸ್ಥನಾರಿ ಸಶಕ್ತ ಪರಿವಾರ ಅಭಿಯಾನ (17–09–25 ರಿಂದ 02–10–25)ಕಾರ್ಯಕ್ರಮ

## ಪ್ರತಿಯೊಬ್ಬರೂ ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಿ–ಸಂಜುಕುಮಾರ

ಮಹಿಳೆಯರು ಸಶಕ್ತ ಹಾಗೂ ಸುಭದ್ರ ಪರಿವಾರ ನಿರ್ಮಾಪಕರಾಗಿದ್ದಾರೆ. ಆದ್ದರಿಂದ ಎಲ್ಲಿ ಮಹಿಳೆ ಸ್ವಸ್ಥವಾಗಿರುತ್ತಾಳೆಯೋ ಆ ಪರಿವಾರ ಸಶಕ್ತವಾಗಿರುತ್ತದೆ. ಆದ್ದರಿಂದ ಮಹಿಳೆಯರು ದೈಹಿಕ, ಮಾನಸಿಕ, ಬೌದ್ದೀಕವಾಗಿ ಸ್ವಸ್ಥರಾಗಿರಬೇಕು. ಅದಕ್ಕೆ ಮಹಿಳೆಯರು ಶೈಕ್ಷಣಿಕವಾಗಿ ಮುಂದುವರೆದು ಬದುಕಿನ ಎಲ್ಲ ಹಂತಗಳನ್ನು, ಎಲ್ಲ ವಿಚಾರಗಳನ್ನು ಅರಿತುಕೊಳ್ಳಬೇಕು. ಅದಕ್ಕೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ. ಸರ್ಕಾರ ಸಕಲ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಂಡು ಸುಂದರ ಸಮಾಜ ನಿರ್ಮಾಣಕ್ಕೆ ಕಾರಣೀಭೂತರಾಗಬೇಕು ಎಂದು ಬೀದರ ಜಿಲ್ಲಾ ಆರೋಗ್ಯ ಇಲಾಖೆಯ ಕ್ಷಯರೋಗ ವಿಭಾಗದ ತಾಲೂಕಾ ಮೇಲ್ವಿಚಾರಕರಾದ ಸಂಜೀಕುಮಾರ ಅವರು ನುಡಿದರು.

ಇಂದು ದಿನಾಂಕ 24–09–2025ರಂದು ಸಿದ್ದಾರ್ಥ ಕಲಾ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದ ಸಂಯುಕ್ತಾಶ್ರಯದಲ್ಲಿ "ಸ್ವಸ್ಥನಾರಿ ಸಶಕ್ತ ಪರಿವಾರ" ಎಂಬ ಅಭಿಯಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ಭಾರತ ಸರ್ಕಾರ ಮಹಿಳೆಯರ ಸರ್ವಾಂಗಿಣ ಅಭಿವೃದ್ದಿಯೊಂದಿಗೆ ಭಾರತದ ಅಭಿವೃದ್ದಿ ಸಾಧಿಸಲು ಸಾಧ್ಯ ಎಂಬ ಸದುದ್ದೇಶದಿಂದ 15 ದಿನಗಳ ಕಾಲ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ಕ್ಷಯರೋಗದಂತಹ ಅನೇಕ ಮಾರಕ ಹಾಗೂ ಅಂಟುರೋಗಗಳಿಂದ ಜನರು ನರಳಿ ಸಾಯುತ್ತಿರುತ್ತಾರೆ. ಕಾರಣ ಅವರಿಗೆ ಆ ರೋಗಗಳ ಬಗೆಗಿರುವ ಕೀಳರಿಮೆ, ಭಯ, ನಾಚಿಕೆ, ಸರಿಯಾದ ತಿಳುವಳಿಕೆಯ ಕೊರತೆಯಿಂದಾಗಿ ಬಚ್ಚಿಟ್ಟುಕೊಳ್ಳುತ್ತಾರೆ. ಅಂತಹ ಭಾವವಿರುವವರಿಗೆ ಸೂಕ್ತ ಮಾರ್ಗದರ್ಶನ ನೀಡಿ, ಚಿಕಿತ್ಸೆ ಪಡೆದುಕೊಳ್ಳುವಂತೆ ತಿಳುವಳಿಕೆ ಮೂಡಿಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಕಾಲೇಜಿ ಪ್ರಾಚಾರ್ಯರಾದ ಗೋಪಾಳ ಬಡಿಗೇರ್ ಅವರು ವಹಿಸಿದರು. ಉಪ ಪ್ರಾಚಾರ್ಯರಾದ ಜಗದೇವಪ್ಪಾ ಚಿಕ್ಕಿ ಹಾಗೂ ಸಂದರ್ಶಕರಾದ ಗೌತಮ ಜ್ಯೋತಿಯವರು ಅತಿಥಿಗಳಾಗಿ ಮಾತನಾಡಿದರು. ಆರಂಭದಲ್ಲಿ ಕುಮಾರಿಯರಾದ ಪಲ್ಲವಿ ಸುಧಾರಾಣಿಯವರು ಬುದ್ದವಂದನೆ ನಡೆಸಿಕೊಟ್ಟರು. ಮಾಣಿಕರಾವ ಭಾಲ್ಕೆಯವರು ಸ್ವಾಗತ ಕೋರಿದರು. ಕೊನೆಯಲ್ಲಿ ಬಸವರಾಜ ಸ್ವಾಮಿಯವರು ವಂದಿಸಿದರು. ಎನ್.ಎಸ್.ಎಸ್. ಸಂಯೋಜನಾಧಿಕಾರಿ ರಾಜಕುಮಾರ ಸಿಂಧೆಯವರು ನಿರೂಪಣೆಗೈದರು. ಕಾರ್ಯಕ್ರಮದಲ್ಲಿ ಕ್ಷಯರೋಗ ವಿಭಾಗದ ಸಂದರ್ಶಕರಾದ ಜಗದೀಶ, ಶ್ರೀಮತಿ ಮಲ್ಲಮ್ಮ, ಕಾಲೇಜಿನ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಹಾಗೂ ಎನ್.ಎಸ್.ಎಸ್ ಘಟಕದ ವಿದ್ಯಾರ್ಥಿಗಳು ಹಾಜರಿದ್ದರು.

ಎನ್ ಎಸ್ ಎಸ್ ಸಂಯೋಜನಾಧಿಕಾರಿ ಪ್ರಾಚಾರ್ಯರು

**ದಿನಾಂಕ 24–09–2025ರಂದು ಸಿದ್ಧಾರ್ಥ ಪದವಿ ಕಾಲೇಜಿನಲ್ಲಿ ಆಯೋಜಿಸಲಾದ “ಸ್ವಸ್ಥನಾರಿ ಸಶಕ್ತ ಪರಿವಾರ” ಅಭಿಯಾನ ಕಾರ್ಯಕ್ರಮದ ಸಂದರ್ಭಿಕ ಚಿತ್ರಗಳು**











